**O.S.No.170/2015 PW.1**

ದಿಃ **02-08-2021** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟಿ ಸವಾಲು : 01 ಮತ್ತು 02 ಪ್ರತಿವಾದಿ ಪರ ಶ್ರೀ.ಎಸ್.ಎಂ.ಎಸ್ ವಕೀಲರವರಿಂದ:**

ನನ್ನ ವಾದ ಪತ್ರದಲ್ಲಿ ಹೇಳಿರುವಂತೆ ದಾವಾ ಸ್ವತ್ತು ಒತ್ತುವರಿಯಾಗಿದೆ ಎಂದು ಅಳತೆಗಾಗಿ 2012 ರಲ್ಲಿ ಅರ್ಜಿಯನ್ನು ಕೊಟ್ಟಿರುತ್ತೇನೆ. ಸದ್ರಿ ಅರ್ಜಿಯ ಸ್ವಿಕೃತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಳತೆಗೆ ಕೊಟ್ಟ ಅರ್ಜಿಯೊಂದಿಗೆ ಪಹಣಿ ಮತ್ತು ಅಧಾರ್ ಕಾರ್ಡನ್ನು ಹಚ್ಚಿರುತ್ತೇನೆ. ಪಾಲುಪತ್ರವನ್ನು ಅರ್ಜಿಯೊಂದಿಗೆ ಕೊಟ್ಟಿಲ್ಲ. ನನ್ನ ಅರ್ಜಿಯ ಮೇರೆಗೆ ಸರ್ವೆ ಇಲಾಖೆಯವರು ಸರ್ವೆ ಮಾಡಲು ಬಂದಿರುವುದಿಲ್ಲ. ನನ್ನ ಅರ್ಜಿಯಲ್ಲಿ ಚಕ್ಕುಬಂದಿಯನ್ನು ನೀಡಿರುತ್ತೇನೆ.

**02.** ನಾನು ಮತ್ತು ನನ್ನ ಮಗ ಅಳತೆ ಮಾಡಿದ ಸಮಯದಲ್ಲಿ ಪ್ರತಿವಾದಿಗಳು ದಾವಾ ಸ್ವತ್ತನ್ನು ಒತ್ತುವರಿ ಮಾಡಿದ್ದಾಗಿ ತಿಳಿದುಬಂತು. ಸದ್ರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ಸದ್ರಿ ವಿಷಯ ಸುಳ್ಳು ಎಂದರೆ ಸರಿಯಲ್ಲ.

**03.** ಎರಡನೇ ಪ್ರತಿವಾದಿ ಕಟ್ಟಿರುವ ಮನೆಯ ಪೂರ್ವಕ್ಕೆ ನನ್ನ ಜಮೀನು ಇದೆ. ನನ್ನ ಜಮೀನು ಇಲ್ಲ ಶಾದಿ ಮಹಲ್ ಇದೆ ಎಂದರೆ ಸರಿ. ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿ. ಉತ್ತರಕ್ಕೆ ನನ್ನ ಅಣ್ಣನಾದ ನಜೀರ್ ಸಾಬ್ ಈತನ ಹೊಲ ಇದೆ. ಈ ವಿಷಯ ಸುಳ್ಳು ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಸುಬನ್ ಸಾಬ್ ರವರ ಮಗ ದಾದಸಾಬ್ ರವರ ಹೊಲ ಇದೆ. ದಿಃ 13-08-1998 ರಲ್ಲಿ ನಾನು ಮತ್ತು ನನ್ನ ಅಣ್ಣ ನಜೀರ್ ಸಾಬ್ ಈಗ ನಾನು ಹೇಳಿದ ಚಕ್ಕುಬಂದಿ ಯಂತೆ 10 ಸೆಂಟ್ಸ ಜಮೀನನ್ನು ಎಸ್.ಚನ್ನಬಸವನಗೌಡ ಇವರಿಗೆ ಮಾರಾಟ ಮಾಡಿದ್ದೇನೆ ಎಂದರೆ ನನ್ನ ಅಣ್ಣ ಮಾರಾಟ ಮಾಡಿರುತ್ತಾನೆ, ನನ್ನ ಹೆಸರು ಜಂಟಿಯಾಗಿ ಇದ್ದ ಕಾರಣ ನಾನು ಸಹಿ ಮಾಡಿರುತ್ತೇನೆ. ಸದ್ರಿ ಅಸ್ತಿಯನ್ನು ಚನ್ನಬಸವನಗೌಡ ಈತನು ಎರಡನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ದಾವಾ ಸ್ವತ್ತು ಮೇಲಿನ ಚಕ್ಕುಬಂದಿಯಲ್ಲಿ ಬರದ ಕಾರಣ ಎರಡನೇ ಪ್ರತಿವಾದಿ ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ.

**04.** 01 ನೇ ಪ್ರತಿವಾದಿ ನನ್ನ ಅಣ್ಣನ ಮಗಳು. 01 ನೇ ಪ್ರತಿವಾದಿಯ ಮನೆಯ ಪೂರ್ವಕ್ಕೆ ಶಾದಿಮಹಲ್ ಇದೆ. ಪಶ್ಚಿಮಕ್ಕೆ ದಾರಿ ಇದೆ. ಉತ್ತರಕ್ಕೆ 02 ನೇ ಪ್ರತಿವಾದಿಯ ಅಸ್ತಿ ಇದೆ. ದಕ್ಷಿಣಕ್ಕೆ ದಾವಾ ಸ್ವತ್ತು ಇದೆ. ದಕ್ಷಿಣಕ್ಕೆ ನನ್ನ ಜಾಗ ಇಲ್ಲಿ ಎಂದರೆ ಸರಿಯಲ್ಲ. 01 ನೇ ಪ್ರತಿವಾದಿ ನನ್ನ ಅಣ್ಣನಿಂದ ಖರೀದಿಸಿರುತ್ತಾಳೆ. ಸದ್ರಿ ಅಸ್ತಿಯು ಪಿರ್ತಾಜಿತ ಅಸ್ತಿ ಎಂದರೆ ಸರಿ. 01 ನೇ ಪ್ರತಿವಾದಿ ಕಟ್ಟಿರುವ ಮನೆ ನಾನು ಮತ್ತು ನನ್ನ ಅಣ್ಣ ಪಾಲುಪಟ್ಟಿಯಲ್ಲಿ ವಿಭಾಗ ಮಾಡಿಕೊಂಡ ಅಸ್ತಿಯಲ್ಲಿ ಎಂದರೆ ಸರಿ. ಪಾಲುಪಟ್ಟಿಯಲ್ಲಿರುವ ಚಕ್ಕುಬಂದಿಯಂತೆ ಮೇಲಿನ ಚಕ್ಕುಬಂದಿಯಂತೆ ಇದೆ ಎಂದರೆ ಸರಿ. 01 ನೇ ಪ್ರತಿವಾದಿ ಮನೆ ಕಟ್ಟುವಾಗ ನಾನು ಪಂಚಾಯಿತಿಗೆ ಯಾವುದೇ ತಕರಾರನ್ನು ಸಲ್ಲಿಸಿಲ್ಲ. ದಾವಾ ಅಸ್ತಿಯ ಪಶ್ಚಿಮಕ್ಕೆ ನನ್ನ ಅಣ್ಣನಿಗೆ ಸಂಬಂಧಿಸಿದ ಅಸ್ತಿ ಇದೆ ಎಂದರೆ ಸರಿಯಲ್ಲ.

**05.** 2012 ರಲ್ಲಿ ನಾನು ಮತ್ತು ನನ್ನ ಅಣ್ಣ ಪಾಲುಪಟ್ಟಿ ಮಾಡಿಕೊಂಡಾಗ ನನಗೆ ಪೂರ್ವಕ್ಕೆ ಮತ್ತು ನನ್ನ ಅಣ್ಣನಿಗೆ ಪಶ್ಚಿಮಕ್ಕೆ ಅಸ್ತಿಗಳು ಬಂದಿರುತ್ತವೆ ಎಂದರೆ ಸರಿಯಲ್ಲ. ಅದರಂತೆ ನನ್ನ ಅಣ್ಣ ಪಶ್ಚಿಮಕ್ಕೆ ಹಾಗೂ ನಾನು ಪೂರ್ವಕ್ಕೆ ಇದ್ದೇವೆ ಎಂದರೆ ಸರಿಯಲ್ಲ. ಪಾಲುಪಟ್ಟಿಯಾದಂತೆ ನಕಾಶೆಯನ್ನು ತೋರಿಸದೇ ರಸ್ತೆ ಕಡೆ ಇರುವ ಅಸ್ತಿಯನ್ನು ನನಗೆ ಬಂದ ಅಸ್ತಿ ಎಂದು ತೋರಿಸುವ ಮೂಲಕ ನಕಾಶೆಯನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**06.** ನಿಪಿ-3 ನಕಾಶೆಯನ್ನು ಮಾಡಿಸಿಕೊಳ್ಳುವ ಸಮಯದಲ್ಲಿ ಅದಕ್ಕೆ ಕೊಟ್ಟ ಅರ್ಜಿಗೆ ನನ್ನ ಅಣ್ಣ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-03 ನ್ನು ತಯಾರಿಸುವ ಸಮಯದಲ್ಲಿ ಸರ್ವೆದಾರರು ದಾವಾ ಸ್ವತ್ತಿಗೆ ಬಂದಿಲ್ಲ ಮತ್ತು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಅಸ್ತಿಯ ಅಕ್ಕಪಕ್ಕದವರಿಗೆ ನಿಪಿ-03 ನ್ನು ತಯಾರಿಸುವ ಸಮಯದಲ್ಲಿ ನೋಟೀಸ್ ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-03 ನ್ನು ತಯಾರಿಸಲು ಕೊಟ್ಟ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ-03 ನ್ನು ಪ್ರತಿವಾದಿ ನಂಃ 01, 02 ಮತ್ತು ನನ್ನ ಅಣ್ಣ ನಜೀರ್ ಸಾಬ್ ರವರು ಅದನ್ನು ಡಿ.ಡಿ.ಎಲ್.ಆರ್ ರವರ ಮುಂದೆ ಪ್ರಶ್ನಿಸಿದ್ದಾರೆ ಮತ್ತು ಸದ್ರಿ ವಿಚಾರಣೆಯಲ್ಲಿ ನಾನು ಹಾಜರಾಗಿರುತ್ತೇನೆ.

**07.** ನಾನು ಮತ್ತು ನನ್ನ ಅಣ್ಣ 2012 ರಲ್ಲಿ ಮಾಡಿಕೊಂಡು ಪಾಲುಪಟ್ಟಿಯ ಮೇರೆಗೆ ಆದ ಮುಟೇಷನ ನ್ನು ನನ್ನ ಅಣ್ಣ ಎ.ಸಿ ನ್ಯಾಯಾಲಯ, ಹರಪನಹಳ್ಳಿಯಲ್ಲಿ ಪ್ರಶ್ನಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ.

**08.** ತಹೀರಬೇಗಂ ನನ್ನ ತಂಗಿ ಮತ್ತು ಆಕೆ ತನ್ನ ಪಾಲನ್ನು ಕೇಳಿ ಇದೇ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದಳು ಎಂದರೆ ಸರಿ. ಸದ್ರಿ ದಾವೆಯು ಚಾಲ್ತಿಯಲ್ಲಿ ಇದ್ದಾಗ ನನ್ನ ಮತ್ತು ನನ್ನ ಅಣ್ಣನ ಮಧ್ಯೆ ಅಸ್ತಿಗಳು ಜಂಟಿಯಾಗಿ ಇದ್ದವು ಎಂದರೆ ಸರಿಯಲ್ಲ. ಜಂಟಿಯಾಗಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ದಾವಾ ಸ್ವತ್ತು ಸಹ ತಂಗಿ ಹೂಡಿದ ದಾವೆಯ ಅಸ್ತಿಯಾಗಿತ್ತು ಎಂದರೆ ಇದ್ದಿರಬಹುದು. ಸದ್ರಿ ತಹೀರ ಬೇಗಂ ರವರು ಓ.ಎಸ್.ನಂಃ 59/2018 ಎಂಬ ಪಾಲುವಾಟ್ನೆಯ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ಸದ್ರಿ ದಾವೆಯಲ್ಲೂ ಸಹ ಈ ಪ್ರಕರಣದ ದಾವೆ ಅಸ್ತಿಯನ್ನು ದಾವಾ ಅಸ್ತಿಯನ್ನಾಗಿ ಮಾಡುವಂತೆ ಕೇಳಿಕೊಂಡಿದ್ದಾರೆ ಎಂದರೆ ಸರಿ. ಓ.ಎಸ.ನಂಃ 147/2015 ಎಂದು ಪಾಲುವಾಟ್ನಿಗಾಗಿ ನಾನು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿ. ಈ ಪ್ರಕರಣದ ದಾವಾ ಸ್ವತ್ತು ಸಹ ಸದರಿ ಪ್ರಕರಣದಲ್ಲಿ ದಾವಾ ಸ್ವತ್ತು ಎಂದರೆ ಸರಿ.

**09.** 02 ನೇ ಪ್ರತಿವಾದಿ 2015 ನೇ ಇಸವಿ ಜನವರಿ ಯಲ್ಲಿ ತನ್ನ ಅಸ್ತಿಯಲ್ಲಿ ಕಾಪೌಂಡ್ ನ್ನು ಕಟ್ಟಿದ್ದಾನೆ ಎಂದರೆ ಸರಿ. ಇದಾದ ನಂತರ 2015 ರ ಅಕ್ಟೋಬರ್ ನಲ್ಲಿ ಕಾಂಪ್ಲೇಕ್ಸ ನ್ನು ಕಟ್ಟಲು ಚಾಲು ಮಾಡಿರುತ್ತಾರೆ ಎಂದರೆ ಸರಿ. ಸದ್ರಿ ಕಾಂಪ್ಲೇಕ್ಸ ಕಾಪೌಂಡ್ ಒಳಗಡೆ ಇರುತ್ತದೆ ಎಂದರೆ ಹಿಂದುಗಡೆಯ ಕಾಪೌಂಡ್ ಒಳಗಡೆ ಇರುತ್ತದೆ. ಸದ್ರಿ ಕಾಂಪ್ಲೇಕ್ಸ ನ ಪೂರ್ವಕ್ಕೆ ಕಾಪೌಂಡ್ ಇರುತ್ತದೆ. ದಾವಾ ಸ್ವತ್ತಿನ ಸುತ್ತಲೂ ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿ. ಸದ್ರಿ ಸ್ಥಳದಲ್ಲಿ 30-40 ಅಡಿ ಜಾಗಕ್ಕೆ 2-3 ಲಕ್ಷ ಬೆಲೆ ಇದೆ ಎಂದರೆ ಇರಬಹುದು. ಈ ದಾವಾ ಅಸ್ತಿಯು ಸರಿ ಸುಮಾರು 10-12 ಲಕ್ಷ ಬೆಲೆ ಬಾಳುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ.

**10.** ಪ್ರತಿವಾದಿಗಳು 2013 ಮತ್ತು 2015 ರಲ್ಲಿ ದಾವಾ ಅಸ್ತಿಯ ನನ್ನ ಸ್ವಾಧೀನಕ್ಕೆ ಅಡೆತಡೆ ಮಾಡಿರುತ್ತಾರೆ. ಪ್ರತಿವಾದಿಗಳು ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಪೋಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇನೆ ಎಂದರೆ

ಸರಿ. ಸದರಿ ದೂರಿನ್ವಯ ಬಿ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ಯಾವುದೇ ಒತ್ತುವರಿ ಮಾಡದೇ ಇದ್ದರೂ ಸಹ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ, ಹೆ, ಕೇ, ಸರಿ ಇದೆ**

(ಶ್ರೀ.ವೀರೇಶ್ ಕುಮಾರ್.ಸಿ.ಕೆ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.